MYSORE LEGISLATIVE ASSEMBLY

Monday, 17th July 1967

The House met in the Assembly Chamber, Vidhana Soudha, Bangalore, at One of the Clock.

Mr. SPEAKER (SRI B. VAIKUNTA BALIGA, B. A., B. L.) in the Chair.

STARRED QUESTIONS

(to which oral answers were given)

Mosquito Nuisance in Bangalore

*Q.—67. Sri T. R. SHAMANNA (Fort).—

Will the Minister for Municipal Administration be pleased to state:—

(*a*) whether they are aware of the increased Mosquito Nuisance in the City of Bangalore;

(*b*) the steps taken to prevent this nuisance ?

A.—Sri R. M. PATIL (Minister for Municipal Administration).—

(*a*) Yes.

(*b*) 1. Intensification of spraying programme.

2. Filling up pits.

3. Extension of underground drainage connections.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಯವರೇ, ಈ ಬೆಂಗಳೂರಿನಲ್ಲಿ ಸೊಳ್ಳೆಗಳ ಕಾಟ ವಿಪರೀತವಾಗಿದೆ, ಅದರಲ್ಲೂ, ಒಂದೊಂದು ಸೀಸನಿನಲ್ಲಿ ವಿಪರೀತ ಹೆಚ್ಚಾಗುತ್ತದೆ, ಮತ್ತೊಂದು ಸೀಸನಿನಲ್ಲಿ ಸ್ವಲ್ಪ ಕಡಿಮೆಯಾಗುತ್ತದೆ. ಇದರ ಬಗ್ಗೆ ತಜ್ಞರು ಏನಾದರೂ ಪರೀಕ್ಷೆ ಮಾಡಿ, ಇದಕ್ಕೆ ಸರಿಯಾದಂತಹ ಮದ್ದು ಕಂಡುಹಿಡಿಯುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಿ.

ಶ್ರೀ ಆರ್. ಎಂ. ಪಾಟೀಲ್.—ಇದರ ಬಗ್ಗೆ ಹಿಂದೆ ಹೆಲ್ತ್ ಆಫೀಸರಾಗಿದ್ದವರು ಒಂದು ಬಹಳ ದೀರ್ಘವಾದ ರಿಪೋರ್ಟು ಕೊಟ್ಟಿದ್ದಾರೆ. ಅದರೊಳಗೆ ಎರಡು ತರದ ಸಲಹೆಗಳನ್ನು ಕೊಟ್ಟಿದ್ದಾರೆ. ಮೊದಲನೆಯ ಸಲಹೆ ಖಾಯಂ ಆಗುವಂಥಾದ್ದು. ಎರಡನೆಯದು ತಾತ್ಕಾಲಿಕವಾಗಿ ಮೇಲಿಂದ ಮೇಲೆ ಮಾಡತಕ್ಕ ಕಾರ್ಯಕ್ರಮ. ಇವುಗಳ ಬಗ್ಗೆ ಸವಿಸ್ತಾರವಾಗಿ ಕೊಟ್ಟಿದ್ದಾರೆ. ಇದರ ವಿವರವನ್ನು ಹೇಳಬೇಕೆಂದರೆ ಹೇಳಬಹುದು.

ಈ ಪರ್ಮನೆಂಟ್ ಮೆಜರಿನೊಳಗೆ ಕೆಲವು ಟ್ಯಾಂಕುಗಳನ್ನು ತೆಗೆದುಹಾಕಬೇಕಾಗುತ್ತದೆ ಮತ್ತು ಕೆಲವು ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕಾಗುತ್ತದೆ. ಅಂಥ ಟ್ಯಾಂಕುಗಳ ಪೈಕಿ ಕೋರ ಮಂಗಲ ಟ್ಯಾಂಕ್ ಮತ್ತು ಅದರ ಕೆಳಗಡೆ ಅಚ್ಚುಕಟ್ಟು ಅಭಿವೃದ್ಧಿಮಾಡಬೇಕಾಗುತ್ತದೆ ಮತ್ತು ಕೆಂಪಾಂಬುಧಿ ಕೆರೆ, ಚೆನ್ನಮ್ಮನ ಕೆರೆ, ಅವಳ ಹಳ್ಳಿ ಕೆರೆ ಪ್ರದೇಶ ಮೊದಲಾದುವುಗಳು. ಈ

(ಶ್ರೀ ಆರ್. ಎಂ. ಪಾಟೀಲ್)

ಕೆಂಪಾಂಬುಧಿ ಕೆರೆಯ ಬಗ್ಗೆ ಬ್ರೀಚ್ ಮಾಡಬಾರದು ಎಂದು ಸಿಟಿ ಬ್ಯೂಟಿಫಿಕೇಶನ್ ಕಮಿಟಿಯವರು ವರದಿ ಮಾಡಿದ್ದಾರೆ. ಮತ್ತು ಎಲ್ಲೆಲ್ಲಿ ಇರಿಗೇಶನ್ ಮಾಡುತ್ತಾರೋ, ಅಂಥ ಸಿದ್ದಾಪುರ ಅಚ್ಚು ಕಟ್ಟು ಮತ್ತು ಯಡಿಯೂರು ಅಚ್ಚುಕಟ್ಟಿನೊಳಗೆ ಈ ಸಿವರೇಜ್ ನೀರನ್ನು ಉಪಯೋಗಿಸಿಕೊಂಡು ಹುಲ್ಲುಗಳನ್ನು ಬೆಳೆಸುವುದನ್ನು ನಿಲ್ಲಿಸಬೇಕು, ಮತ್ತು ಎಲ್ಲೆಲ್ಲಿ ಕ್ಯಾರೀಸ್ ಇವೆಯೋ, ಆ ಕ್ಯಾರಿಗಳನ್ನು ತುಂಬಿಸಬೇಕು ಎನ್ನುವುದು.

ತಾತ್ಪೂರಿತವಾಗಿರುವ ಮೆಜರ್. ಎರ್ಲೆಲ್ಲಿ ಹರಿಯುವ ನೀರು ನಿಲ್ಲುತ್ತದೆ ಅದನ್ನು ನರಿಯಾಗಿ ಹೋಗುವಂತೆ ಮಾಡುವುದು ಮತ್ತು ಇಷ್ಟೇ ಅಲ್ಲದೆ ರಾಸಾಯನವನ್ನು ಸಂಪಡಿಸುವ ಕೆಲಸ ಬಹಳ ದಿವಸಗಳಿಂದ ನಡೆಸತಕ್ಕದ್ದು. ಇದಕ್ಕೆ ಪ್ರತಿ ವರ್ಷ 9 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಈ ಎಣ್ಣೆಯಿಲ್ಲದೆ ಆಗಿದೆ. ಮಾರ್ಚ್ ತಿಂಗಳೊಳಗೆ, ಅಂದರೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗ ಸೊಳ್ಳೆಗಳು ಹೆಚ್ಚಾಗಿದ್ದವು. ಈಗ ಕಡಿಮೆಯಾಗಿವೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಈಗಿರುವ ಔಷಧಿ ಪರಿಣಾಮಕಾರಿಯಾಗದೆ ಸೊಳ್ಳೆಗಳು ಹೆಚ್ಚಾಗಿವೆ. ಆದ್ದರಿಂದ ಬೆಂಗಳೂರಿನಲ್ಲಿರತಕ್ಕ ಸೊಳ್ಳೆಗಳನ್ನೂ ಹಾಗೂ ಏಕ್ಸೋರಿಯಾ ಅಸ್ವಸ್ಥೆ ಯಲ್ಲಿರುವ ತಗಣಿಗಳನ್ನೂ ನಾಶ ಮಾಡಿ ಹೋಗಲಾಡಿಸುವುದಕ್ಕೆ ತೀವ್ರ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಈಗ ಸೊಳ್ಳೆಗಳ ಬಗ್ಗೆ ತೀವ್ರ ಕಾರ್ಯಕ್ರಮ ತೆಗೆದು ಕೊಂಡಿದೆ. ತಗಣಿಯ ಬಗ್ಗೆ ಅದು ವಿಚಾರ ಮಾಡುವಂಥಾದ್ದು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಉತ್ತರ ಕೊಡುತ್ತಾ ಹೇಳಿದಿರಿ, ಸಿಂಪಡಿಸುವ ಕಾರ್ಯ ಕ್ರಮದಿಂದ ಸೊಳ್ಳೆಗಳ ಕಾಟವನ್ನು ಕಡಮೆ ಮಾಡುತ್ತೇವೆಂದು ಅನೇಕ ವರ್ಷಗಳಿಂದ ಅಡುಗೋಡಿ ಹತ್ತಿರ ರಿಜರ್ವ್ ಪೋಲೀಸ್ ಲೈನ್‌ಗಳು ಇವೆ. ಅಲ್ಲ ಸಾಯಂಕಾಲದ ಹೊತ್ತು ಬರೀ ಸೊಳ್ಳೆಗಳೇ ಇರುತ್ತವೆ. ಬಾಯೊಳಗೆ ಹೋಗುತ್ತವೆ. ನಾವು ಸಹ ಕೆಲವು ದಿನ ಅನುಭವಿಸಿದ್ದೇವೆ. ಅಲ್ಲಿಯ ಜನಗಳಿಗೆ ಇದರಿಂದ ಬಹಳ ತೊಂದರೆಯಾಗುತ್ತಿದೆ. ಇದರಿಂದ ಕೈಗಾರಿಕೆಗಳ ಪ್ರಗತಿಗೆ ಅವಕಾಶ ವಾಗುತ್ತಿಲ್ಲ. ರಾತ್ರಿ ಕಾಲದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅಡುಗೋಡಿ ಹತ್ತಿರ ಸ್ಯೂಯೇಜ್ ವ್ಯವಸ್ಥೆ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಇದಕ್ಕೆ ಉತ್ತರ ಹೇಳಿದ್ದಾಯಿತು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಬೆಂಗಳೂರಿನಲ್ಲಿ ಅನೇಕ ಉದ್ಯಾನವನಗಳು ಇವೆ, ಇಲ್ಲಿರುವ ಗಿಡಗಳಿಗೆ ಸಾಯಂಕಾಲದ ಹೊತ್ತು ನೀರು ಹಾಕುವುದರಿಂದ ಸೊಳ್ಳೆಗಳು ಬರುತ್ತವೆಂದು ಹೇಳು ತ್ತಾರೆ. ಆದ್ದರಿಂದ ಬೆಳಿಗ್ಗೆ ಎಂಟು ಘಂಟೆಯೊಳಗೆ ನೀರನ್ನು ಹಾಕುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಸಾಯಂಕಾಲದ ಹೊತ್ತು ಗಿಡಗಳಿಗೆ ನೀರನ್ನು ಹಾಕುವುದರಿಂದ ಅವುಗಳಿಗೆ ಹಿತವಾಗುತ್ತದೆ. ಬೆಳಗಿನ ಹೊತ್ತು ಹಾಕುವುದರಿಂದಲೂ ಅವುಗಳಿಗೆ ಹಿತವಾಗುತ್ತದೆ. ಮಧ್ಯಾಹ್ನದ ಹೊತ್ತು ಹಾಕಿದರೆ ಅವುಗಳಿಗೆ ಹಿತವಾಗುವುದಿಲ್ಲ. ನೀರನ್ನು ಹಾಕುವುದರಿಂದ ಸೊಳ್ಳೆಗಳು ಬರುವುದಿಲ್ಲ. ಕೆಟ್ಟ ನೀರನ್ನು ಹಾಕುವುದರಿಂದ ಸೊಳ್ಳೆಗಳು ಬರುತ್ತವೆಂದು ತಜ್ಞರ ಅಭಿಪ್ರಾಯ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಬೆಂಗಳೂರು ಪಟ್ಟಣದ ಸುತ್ತಮುತ್ತ ಎರಡು ಸಾವಿರ ಎಕರೆಯಲ್ಲಿ ಹುಲ್ಲನ್ನು ಬೆಳೆಯುತ್ತಿದ್ದಾರೆ. ಈ ಹುಲ್ಲನ್ನು ಬೆಳೆಯಲು ಕೊಳಚೆ ನೀರನ್ನು ಉಪ ಯೋಗಿಸುತ್ತಿದ್ದಾರೆ. ಹುಲ್ಲನ್ನು ಬೆಳೆಸುವುದನ್ನು ನಿಲ್ಲಿಸಿದರೆ ಸಾವಿರಾರು ಜನರು ನಿರುದ್ಯೋಗಿ ಗಳಾಗುತ್ತಾರೆ. ಈ ಎರಡು ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಸಾವಿರಾರು ಜನರ ಬದುಕು ಏನೋ ನಿಂತು ಹೋಗುತ್ತದೆ ಎಂಬುದು ನಿಜ. ಆದರೆ ಎರಡನೆಯವರ ರಕ್ತ ಹಾಳುಮಾಡುವುದು ಸರಿಯಲ್ಲ, ಅವರಿಗೂ ಉದ್ಯೋಗವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಸೊಳ್ಳೆಗಳ ನಿವಾರಣೆ ಮಾಡುವುದು ಸ್ವಲ್ಪ ಕಷ್ಟ. ಎಲ್ಲೆಲ್ಲಿ ಸೊಳ್ಳೆಗಳು ಜಾಸ್ತಿಯಾಗುತ್ತಿವೆಯೋ, ಅಲ್ಲ ಟ್ಯಾಂಕ್‌ಗಳು ಇರಲ, ಡ್ರೈನಗಳು ಇರಲ, ಅದಕ್ಕೆ ಒಂದು ತರಹ ಎಣ್ಣೆನನ್ನು ಬಿಟ್ಟು ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಏರ್ಪಾಡು ನಡೆಯುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಬೆಂಗಳೂರು ಪ್ರದೇಶದಲ್ಲಿ ಸೊಳ್ಳೆಗಳನ್ನು ನಿವಾರಣೆ ಮಾಡುವುದಕ್ಕೆ ರಾಜ್ಯದ ಆರೋಗ್ಯ ಇಲಾಖೆಯವರು ಈ ಬಾಬಿಗೆ ಗ್ರಾಂಟನ್ನು ಮತ್ತು ಸಿಬ್ಬಂದಿಯನ್ನು ಕೊಟ್ಟಿದ್ದಾರೆಯೆ ?

ಶ್ರೀ ಆರ್. ಎಂ. ಪಾಟೀಲ್.—ಈ 9 ಲಕ್ಷ ರೂಪಾಯಿಗಳಲ್ಲಿ ಅವರೇ ಅರ್ಧದಷ್ಟು ಕೊಟ್ಟಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಉತ್ತರವಾಗಿ ಒಳಚರಂಡಿ ಸಂಬಂಧಕಗಳನ್ನು ವಿಸ್ತರಿಸುವುದು ಎಂದು ಹೇಳಿದ್ದೀರಿ. ಬೆಂಗಳೂರಿನ ಸುತ್ತಮುತ್ತ ಹೊಸದಾಗಿ ಕಾರ್ಪೊರೇಷನ್‌ಗೆ ಸೇರುವಂತಹ ರಾಜಾಜಿನಗರ ಮತ್ತು ಯಶವಂತಪುರದ ಕಡೆಗಳಲ್ಲಿ ಒಳಚರಂಡಿ ಸಂಬಂಧಕಗಳನ್ನು ಮಾಡದಿರುವುದರಿಂದ ಅಲ್ಲಿಯ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇನ್ನು ಒಂದು ವರ್ಷದೊಳಗಾಗಿ ಒಳಚರಂಡಿ ಸಂಬಂಧಕಗಳನ್ನು ಮಾಡಿನುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ಎಂ ಪಾಟೀಲ್.—ಈ ಬಗ್ಗೆ ಅನೇಕ ಕೆಲಸಗಳು ನಡೆದಿದೆ. 12 ಅಡಿಗಿಂತ ಹೆಚ್ಚಿನ ಡ್ರೈನೇಜ್ ಪೈಪ್ ಕೊಡಿನುವ ಕೆಲಸ ನಿಧಾನವಾಗುತ್ತಿದೆ. ಏತಕ್ಕೆಂದರೆ, ಇಂತಹ ದೊಡ್ಡ ಕೆಲಸಗಳನ್ನು ವರ್ಲ್ಡ್ ಬ್ಯಾಂಕ್ ಎಕ್ಸ್‌ಪರ್ಟ್ ಕನ್‌ಸಲ್ಟೆಂಟ್ಸ್ ಅವರನ್ನು ಕೇಳಿ ಮಾಡಬೇಕಾಗುತ್ತದೆ ನಧ್ಯಕ್ಕೆ ಕೆಲವು ಕೆಲಸಗಳನ್ನು ವಾಟರ್ ಬೋರ್ಡ್‌ನವರು ಪ್ರಾರಂಭ ಮಾಡಿದ್ದಾರೆ.

Jahagir Villages of Kundgol Taluk

*Q.—267. **Sri A. J. DODDAMETI** (Ron).—

Will the Minister for Revenue and Forests be pleased to state :—

(*a*) whether it has come to their notice that writ petition has been filed by Inamdars against the decisions of the Government that Hanchinala, Benakanahalli villages of Kundgol Taluk, Dharwar District are Jahagir villages ;

(*b*) if so, the steps taken by them to file counter affidavit, etc., to prove their stand ?

A.—**Sri B. RACHAIAH** (Minister for Revenue and Forests).—

(*a*) Yes.

(*b*) The question is being pursued.

ಶ್ರೀ ಎ. ಜೆ. ದೊಡ್ಡಮೇಟಿ.—ಇವತ್ತಿನವರೆಗೂ ಕೌಂಟರ್ ಅಫಿಡವಿಟ್ ಹಾಕಿದ್ದಾರೆಯೇ ಇಲ್ಲವೇ ?

† ಶ್ರೀ ಬಿ. ರಾಚಯ್ಯ.—ಇವತ್ತಿನವರೆಗೂ ಇನ್ನೂ ಹಾಕಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ ಅದು ಯಾವ ಪ್ರಗತಿಯಲ್ಲಿ ಇದೆ ?

ಶ್ರೀ ಬಿ. ರಾಚಯ್ಯ.—ಬೆಳಗಾಂ ಡಿವಿಜನಲ್ ಕಮಿಷನರು ಅಫಿಡವಿಟ್‌ನಲ್ಲಿ ಕೊಟ್ಟಿರತಕ್ಕ ಪ್ರತಿಯೊಂದು ವಿಷಯದಲ್ಲೂ ಕೂಡ ಅವರಿಂದ ತಪಶೀಲನ್ನು ತರಿಸಿಕೊಂಡು ಅದನ್ನು ರಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೆವು, ಅವರು ಕೌಂಟರ್ ಅಫಿಡವಿಟ್ ತಯಾರು ಮಾಡಿ ಗವರ್ನಮೆಂಟ್ ಪ್ಲೀಡರ್ ಹತ್ತಿರ ಕಳುಹಿಸಿದ್ದಾರೆ.

---

†Indicates that the speeches or remarks have not been revised by the member concerned.